<u>ದಿ:**23.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>

<u>ಪಾಟೀ ಸವಾಲು</u>:- ಆರೋಪಿ ಪರ K.M.A for G.H.S., ವಕೀಲರಿಂದಃ-

ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿರುವ ಮಾಹಿತಿಯು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಯಾವುದೇ ಹಣ ಪಡೆದಿರುವುದಿಲ್ಲ . ನಿಪಿ 1 ಚೆಕ್ ಅನ್ನು ಸಹಿ ಮಾಡಿ ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಭರತ್ ರಾಜ್ ಎಂಬುವವರು ಸೇರಿಕೊಂಡು ಆರೋಪಿಗೆ

ಸೇರಿದ ನಿಪಿ 1 ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ನನ್ನಿಂದಯಾವುದೇ ಹಣವನ್ನು ಪಡೆದಿರುವುದಿಲ್ಲ . ನಾನು ಆರೋಪಿಗೆ **5** ಲಕ್ಷ ಹಣ ನೀಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲೆಗಳನ್ನು ತಯಾರಿಸಿ ನ್ಯಾಯಾಲಯ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ನಿಪಿ **3** ನೋಟೀಸ್ ತಲುಪದೇ ಬೇರೆ ವಿಳಾಸಕ್ಕೆ ತಲುಪುವ ಹಾಗೆ ಮಾಡಲು ಉದ್ದೇಶ ಪೂರ್ವಕವಾಗಿ ಬೇರೆ ವಿಳಾಸಕ್ಕೆ ಕಳುಹಿಸಿಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಆರೋಪಿ ಅಂಗಡಿ ವಿಳಾಸಕ್ಕೆ ನಿಪಿ **3** ನೋಟೀಸ್ ಕಳುಹಿಸಿದೇ ಬೇರೆ ವಿಳಾಸಕ್ಕೆ ಕಳುಹಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ನೀಡಿದೆ ಎಂದು ಹೇಳುವ **5** ಲಕ್ಷ ಹಣವನ್ನು ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದರೆ ಸಾಕ್ಷಿ ರೂ**.500** ಮತ್ತು ರೂ**.200** ಮುಖಬೆಲೆಯ ನೋಟಗಳು ಇರುತ್ತವೆ **.** ನನಗೆ ರೂ**.500** ರೂಪಾಯಿ ನೋಟುಗಳು ಮತ್ತು ರೂ**.200** ಮುಖ ಬೆಲೆ ನೋಟುಗಳು ಎಷ್ಟುಎಂದು ಹೇಳಲು ಬರುವುದಿಲ್ಲ **.** ನಾನು ಆರೋಪಿಗೆ ಹಣ ನೀಡಿದ್ದ ವೇಳೆಯಲ್ಲಿ ಸರಿಯಾದ ರೀತಿಯಲ್ಲಿ ಸಾಕ್ಷಿ ನುಡಿಯುತ್ತಿದ್ದೇ ಎಂದರೆ ಸರಿಯಲ್ಲ. ಆರೋಪಿಗೆ ನಾನು **500** ರೂಪಾಯಿ ಮುಖ ಬೆಲೆ ಹೊಸನೋಟು ನೀಡಿರುತ್ತೇನೆ **.** ನನ್ನಮತ್ತು ಆರೋಪಿ ಮಧ್ಯೆ ಯಾವುದೇ ಹಣ ಕಾಸಿನ ವ್ಯವಹಾರ ನಡೆದಿರುವುದಿಲ್ಲ **.** ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು